# ಕೃಷ್ಣನ ಹೈಲೈಟ್ಸ್

ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ' ಸಿನಿಮಾ ಶೀಘ್ರದಲ್ಲೇ ತೆರೆಗೆ ಬರುವ ಸೂಚನೆ ಸಿಕ್ಕಿದೆ. ಹಲವು ವಿಶೇಷಗಳನ್ನು ಹೊಂದಿರುವ ಈ ಸಿನಿಮಾವನ್ನು ಸದ್ಯದಲ್ಲೇ ಪ್ರೇಕ್ಷಕರ ಮುಂದೆ ತರುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

ಈಚೆಗೆ ಸಿನಿಮಾದ ಮೊದಲ ಹಾಡನ್ನು ಬಿಡುಗಡೆ ಮಾಡಿದ್ದು, 'ಮ್ಯೆ ಮ್ಯಾರೇಜ್ ಈಸ್ ಫಿಕ್ಸ್ಡ್' ಎಂದು ರ್‍ಯಾಪ್ ಶೈಲಿಯ ಹಾಡಿನಲ್ಲಿ ಎಂಟು ನಟಿಯರೊಂದಿಗೆ ಗಣೇಶ್ ನೃತ್ಯ ಮಾಡಿದ್ದಾರೆ.

ಕನ್ನಡ ಸಿನಿಮಾರಂಗದ 64 ಕಲಾವಿದರು ನಟಿಸಿರುವುದು ಈ ಚಿತ್ರದ ಮತ್ತೊಂದು ವಿಶೇಷ ಸಂಗತಿ. ಜೊತೆಗೆ ಅರ್ಜುನ್ ಜನ್ಯ ಸಂಗೀತ ನೀಡಿರುವ ಆರು ಹಾಡುಗಳು 'ಕೃಷ್ಣಂ ಪ್ರಣಯ ಸಖಿ' ಚಿತ್ರದ ಹೈಲೈಟ್ ಎಂದಿದೆ ಚಿತ್ರತಂಡ.

'ದಂಡುಪಾಳ್ಯ' ಖ್ಯಾತಿಯ ಶ್ರೀನಿವಾಸ್‌ರಾಜು ಈ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಕೌಟುಂಬಿಕ ಕಥಾಹಂದರದ ಈ ಚಿತ್ರದಲ್ಲಿ ಗಣೇಶ್‌ಗೆ ನಾಯಕಿಯಾಗಿ ಮಾಳವಿಕಾ ನಾಯರ್ ನಟಿಸಿದ್ದಾರೆ. ಈ ಮೂಲಕ ಮಾಳವಿಕಾ ಅವರು ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟಿದ್ದಾರೆ. ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧುಕೋಕಿಲ, ರಂಗಾಯಣ ರಘು, ಶಶಿಕುಮಾರ್, ಶ್ರುತಿ, ಭಾವನಾ, ಅಶೋಕ್, ರಾಮಕೃಷ್ಣ, ಶಿವಧ್ವಜ್, ರಘುರಾಮ್, ಮಾನಸಿ ಸುಧೀರ್, ಅಂಬುಜ, ಗಿರಿ ಶಿವಣ್ಣ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.





# A ಪುಳಕದಲ್ಲಿ ಚಾಂದಿನಿ

1998ರಲ್ಲಿ ತೆರೆಕಂಡಿದ್ದ, ಉಪೇಂದ್ರ ಅಭಿನಯದ 'A' ಸಿನಿಮಾ ಸೂಪರ್ ಹಿಟ್ ಆಗಿತ್ತು. ಮಾತ್ರವಲ್ಲ, ಉಪೇಂದ್ರ ಜೋಡಿಯಾಗಿ ನಟಿಸಿದ್ದ ಚಾಂದಿನಿ ಅವರಿಗೂ ಫೇಮ್ ತಂದುಕೊಟ್ಟ ಸಿನಿಮಾ ಅದಾಗಿತ್ತು. 26 ವರ್ಷಗಳ ನಂತರ ಆ ಸಿನಿಮಾವನ್ನು ಈಚೆಗೆ ಮರು ಬಿಡುಗಡೆ ಮಾಡಿದ್ದು, ಉಪೇಂದ್ರ ಅಭಿಮಾನಿಗಳು ಹುರುಪಿನಿಂದ ಸಿನಿಮಾವನ್ನು ಸಂಭ್ರಮಿಸಿದ್ದಾರೆ.

ಸಿನಿಮಾ ರೀ ರಿಲೀಸ್ ಆದ ಬೆನ್ನಲ್ಲೇ ನಟಿ ಚಾಂದಿನಿ ಕೂಡ ಸಂತಸದಿಂದ ಪ್ರತಿಕ್ರಿಯೆ ನೀಡಿದ್ದಾರೆ. "'A' ಸಿನಿಮಾ 26 ವರ್ಷಗಳ ನಂತರ ಮರುಬಿಡುಗಡೆಯಾಗಿದೆ. ಆದರೆ ಇಷ್ಟು ವರ್ಷಗಳ ನಂತರವೂ ಉಪೇಂದ್ರ ಅವರ ಮೇಲೆ ಜನರ ಅಭಿಮಾನ ಕಂಡು ಅಚ್ಚರಿಯಾಯಿತು. ಉಪೇಂದ್ರ ಮೇಲೆ, ಅವರ ಕಥೆಗಳ ಮೇಲೆ ಜನರಿಗಿರುವ ಪ್ರೀತಿ ಕಂಡು ಸಂತಸವಾಗುತ್ತದೆ. ಇಷ್ಟು ವರ್ಷಗಳ ನಂತರವೂ ಉಪೇಂದ್ರ ಅವರಿಗೆ ಫ್ಯಾನ್ ಫ್ರೆಂಜಿ ನೋಡಿ ಪುಳಕವಾಗಿದೆ" ಎಂದಿದ್ದಾರೆ.

ಸಿನಿಮಾ ಜೊತೆಗೆ ತಮ್ಮ ನೆನಪುಗಳಿಗೆ ಮರಳಿದ ಅವರು, 'ನಟಿಯಾಗಿ ನನಗೆ ಕನ್ನಡ ಸಿನಿಮಾರಂಗ ಐಡೆಂಟಿಟಿ ಕೊಟ್ಟಿತು. ಇತರೆ ಭಾಷೆಗಳಲ್ಲಿ ಕೆಲಸ ಮಾಡಿದ್ದರೂ, ನಾನು ನನ್ನನ್ನು ಕನ್ನಡ ನಟಿ ಎಂದೇ ಕರೆದುಕೊಳ್ಳುವುದು. ಕೆಲವು ವರ್ಷಗಳಿಂದ ಸಿನಿಮಾರಂಗದ ಬಿಸಿನೆಸ್ ವಿಭಾಗದಲ್ಲಿ ತೊಡಗಿಕೊಂಡಿದ್ದೇನೆ. ಸಿನಿಮಾಗಳ ಜಾಗತಿಕ ವಿತರಣೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಈಗ ಒಳ್ಳೆಯ ಸಿನಿಮಾಗಳನ್ನು ಭಾಷೆಯಿಂದಾಚೆಗೂ ಜನರು ಮೆಚ್ಚುತ್ತಾರೆ. ಹಿಂದಿ, ತಮಿಳು, ಮಲೆಯಾಳಂ ಹಾಗೂ ತೆಲುಗು ಭಾಷೆಯ ಸಿನಿಮಾಗಳ ಬಗ್ಗೆ ಮಾತನಾಡುತ್ತಾರೆ. ಕನ್ನಡ ಸಿನಿಮಾಗಳ ಬಗ್ಗೆಯೂ ಮಾತನಾಡುತ್ತಾರೆ. ಆ ಜನಪ್ರಿಯತೆ ಇನ್ನಷ್ಟು ಹೆಚ್ಚಬೇಕಿದೆ' ಎಂದಿರುವ ಅವರು, ಈ ನಿಟ್ಟಿನಲ್ಲಿ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ.

ಸದ್ಯ 'A' ಸಿನಿಮಾದ ಎರಡನೇ ಭಾಗ ತರುವ ಆಲೋಚನೆಯಿದ್ದು, ಅದರಲ್ಲಿಯೂ ಚಾಂದಿನಿ ಅವರು ತೊಡಗಿಕೊಂಡಿದ್ದಾರೆ. 'ಈ ಕಥೆಯ ಬಗ್ಗೆ ಈಗಾಗಲೇ ಕೆಲಸ ಆರಂಭಗೊಂಡಿದೆ. ಉಪೇಂದ್ರ ಅವರನ್ನೂ ಅಪ್ರೋಚ್ ಮಾಡಬೇಕಿದೆ. ಕಥೆ ಅವರಿಗೆ ಒಪ್ಪಿಗೆಯಾಗುವ ಭರವಸೆ ಇದೆ' ಎಂದಿದ್ದಾರೆ.